<u>ದಿನಾಂಕಃ 16-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>
<u>ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ಈ ದಿನ ನಾನು Loan Agreement and Ledger Extract ಅನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಲೋನ್ ಅಗ್ರಿಮೆಂಟ್ ನ ನಂಬರ್ ಅನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಲೋನ್ ಅಕೌಂಟ್ ನಂಬರ್ ಮತ್ತು ಅಗ್ರಿಮೆಂಟ್ ನಂಬರ್ ಒಂದೇ ಇರುತ್ತದೆ. ಈ ಲೋನ್ ಅಕೌಂಟ್ ಗೆ ಸಂಬಂಧಪಟ್ಟು ಪಿ.ಸಿ.ಆರ್ ನಂ.47/2024 ಕೇಸನ್ನು ದಾಖಲಿಸಿದ್ದು ಸದರಿ ಕೇಸು ಪೊಲೀಸ್ ಠಾಣೆಗೆ ರೆಫರ್ ಆಗಿತ್ತು ಎಂದರೆ ಸರಿ. ಸದರಿ ಕೇಸಿನಲ್ಲಿ 3 ಬಾರಿ ನೋಟೀಸ್ ನೀಡಿದ್ದರೂ ಕೂಡಾ ನಾವು ಸ್ಥಳ ಮಹಜರ್ ಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಆರೋಪಿಯು ಮುಚ್ಚಿಟ್ಟಿರುತ್ತಾನೆ ಎಂದು ಹೇಳಿ ಸದರಿ ಗಾಡಿಯನ್ನು ತಮಗೆ ತೋರಿಸಿಕೊಡಬೇಕು ಎಂದು ನಾವು ಸದರಿ ದೂರಿನಲ್ಲಿ ನಮೂದು ಮಾಡಿದ್ದೆವು ಎಂದರೆ ಸರಿ. ಸದರಿ ಕೇಸು ಏನು ಆಗಿರುತ್ತದೆ ಎನ್ನುವ ಬಗ್ಗೆ ನಾನು ನೋಡಿ ಹೇಳಬಹುದು.

ಈ ಕೇಸಿನ ಪಿರ್ಯಾದಿಯಲ್ಲಾಗಲೀ ನೋಟೀಸ್ ನಲ್ಲಿ ಎಷ್ಟು ಸಾಲವನ್ನು ಆರೋಪಿಗೆ ನೀಡಲಾಗಿತ್ತು ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ರೂ.16,08,000/- ಸಾಲವನ್ನು ನೆಫ್ ಮೂಲಕ ನೀಡಿರುತ್ತೇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಈ ದೂರಿನಲ್ಲಿ ನಮೂದು ಮಾಡಿರುವ ವಾಹನಕ್ಕೆ

ಸಂಬಂಧಪಟ್ಟಂತೆ ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ Commercial Execution Petition ಸಲ್ಲಿಸಿರುತ್ತೇವೆ ಎಂದರೆ ಸರಿ. ಅದರಲ್ಲಿ ಎಷ್ಟು ಅವಾರ್ಡ್ ಆಗಿರುತ್ತದೆ ಎನ್ನುವ ಬಗ್ಗೆ ನಾನು ನೋಡಿ ಹೇಳಬಹುದು. ಈ ಪಿರ್ಯಾದಿಯಲ್ಲಿ ತೋರಿಸಿರುವ ಸಾಲದ ಹಣ ಹಾಗೂ ಸದರಿ ಹಾಸನದ ಜಿಲ್ಲಾ ನ್ಯಾಯಾಲಯದಲ್ಲಿ ಇರುವ Execution Petition ನಲ್ಲಿ ತೋರಿಸಿರುವ ಹಣ ಒಂದೇ ಲೋನ್ ಅಕೌಂಟ್ ಗೆ ಸಂಬಂಧಪಟ್ಟದ್ದು ಇರುತ್ತದೆ.

ಆರೋಪಿಯು ದಿಃ19.07.2018 ರಂದು ರೂ.16,08,000/- ಹಣವನ್ನು ಸಾಲವಾಗಿ ಪಡೆದಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕೊರೋನಾ ಸಮಯದಲ್ಲಿ ಸದರಿ ವಾಹನವನ್ನು ಅಮಾನತ್ತುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಲೋನ್ ಅಕೌಂಟ್ ಗೆ ಸಂಬಂಧಪಟ್ಟು ಆರೋಪಿಯು ಎಷ್ಟು ಹಣವನ್ನು ಕಟ್ಟಿರುತ್ತಾರೆ ಎಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ದೂರಿನಲ್ಲಾಗಲೀ ಅಥವಾ ನೋಟೀಸ್ ನಲ್ಲಿ ಆಗಲೀ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಿ ಆಗಲೀ ಸದರಿ ಲೋನ್ ಅಕೌಂಟ್ ಗೆ ಸಂಬಂಧಪಟ್ಟು ಬಡ್ಡಿ ಎಷ್ಟು ಹಾಕಿರುತ್ತೇವೆ ಎಂದು ತಿಳಿರುತ್ತೇವೆ ಎಂದರೆ ಸರಿ. ಆರೋಪಿಯು ಸರಿಯಾಗಿ ಕಂತುಗಳನ್ನು ಕಟ್ಟಿದ್ದರೂ ಕೂಡಾ ಕರೋನಾ ಸಮಯದಲ್ಲಿ ಸದರಿ ವಾಹನವನ್ನು ನಾವು ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು 40 ಸಾವಿರ - 45 ಸಾವಿರದಷ್ಟು ಕಟ್ಟಿರುವ ಹಣ ವ್ಯತ್ಯಾಸವಿದ್ದು ಅದನ್ನು ಪರಿಶೀಲನೆ ಮಾಡಲು ಆರೋಪಿಯ ಬಳಿಯಿಂದ ರಶೀದಿಗಳನ್ನು

ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಕರೋನಾ ಸಮಯದಲ್ಲಿ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದು ಕಾನೂನುಬಾಹಿರವಾಗುತ್ತದೆ ಎಂದುಕೊಯಿ ನಾವು ಆರೋಪಿಯ ವಿರುದ್ಧ ಒಂದು ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣ ಸದರಿ ದೂರಿಗೆ ಸಂಬಂಧಪಟ್ಟು ಪೊಲೀಸರಿಗೆ ನಾವು ಸಹಕಾರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಇದೇ ನ್ಯಾಯಾಲಯದ ಮುಂದೆ ಸಿ.ಸಿ ನಂ.1736/2025 ರಲ್ಲೂ ಈ ಪಿರ್ಯಾದಲ್ಲಿ ತೋರಿಸಿರುವಂತಹ ವಾಹನದ ಸಂಖ್ಯೆಯನ್ನೇ ನಮೂದು ಮಾಡಿರುತ್ತೇವೆ ಎಂದರೆ ಸರಿ. ಆರೋಪಿಯಿಂದ ಭದ್ರತೆಗಾಗಿ ಪಡೆದುಕೊಂಡ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಉದ್ದೇಶಪೂರ್ವಕವಾಗಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡುವ ಉದ್ದೇಶದಿಂದ ಒಂದು ಸುಳ್ಳು ಕೇಸನ್ನು ಆತನ ವಿರುದ್ಧ ನೀಡಿರುತ್ತೇವೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

C.C.No.1735/2025
PW-1